

ಇನ್ನು ಸ್ವಲ್ಪ ಹೂವು ಉಳಿದಿರುವಂತೆಯೇ ಅಮ್ಮನ ಬಳಿ ಬಂದು, 'ಒಂದಕ್ಕೆ ಹೋಗಬೇಕು ಹತ್ತು ನಿಮಿಷದಲ್ಲಿ ಬರ್ತೀನಿ' ಎಂದಳು. 'ಏನೇ ನಿಂದು, ದಿನಾ ಇಷ್ಟು ಹೊತ್ತಿಗೆ ಬರುತ್ತೆ, ಎಷ್ಟು ಸರ್ತಿ ಹೇಳ್ಬೇಕು ಮನೇಲಿ ಎಲ್ಲಾ ಮುಗಿಸಿಕೊಂಡು ಬರಬೇಕು ಅಂತ. ಇಲ್ಲಿ ಈ ಗಲೀಜಿನಲ್ಲಿ, ಥು, ಹೋಗು ಹೋಗು ಬೇಗ ಬಾ' ಎಂದು ಉರಿಗಣ್ಣಿನಲ್ಲಿ ಬೆದರಿಸಿ ಕಳಿಸಿದಳು. ಅದೇ ಹೊತ್ತಿಗೆ ಬಾಲನಿಗೂ ಅವಸರವಾಗುವ ಮಹಿಮೆ ಟೀ ಮಂಜನಿಗೆ ಮಾತ್ರ ತಿಳಿದಿತ್ತು. ಬಾಲ ಚಂಪಾ ಇಬ್ಬರೂ ಮೂರು ಅಂತಸ್ತಿನ ಮಾರುಕಟ್ಟೆಯ ಮೆಟ್ಟಿಲುಗಳನ್ನು ಹತ್ತಿ ಮೇಲೆ ಬಂದರೆ, ಅಲ್ಲಿ ವಿಶಾಲವಾದ ತಾರಸಿ, ಯಾರೂ ಕಸ ಗುಡಿಸದ, ತೊಳೆಯದ, ಮಳೆ ಬಂದು ನಿಂತ ನೀರಿನ ಕಲೆಗಳ, ಹದ್ದುಗಳ ಹಿಕ್ಕೆಯ ದುರ್ನಾತ ದಾಟಿ ಮೂಲೆಯಲ್ಲೊಂದು ಕಡೆಗೆ ಇವರೇ ಕಸ ಗುಡಿಸಿ ಒಂದು ಹಳೆ ಪ್ಲಾಸ್ಟಿಕ್ ಹಾಸಿ, ನಾಲ್ಕು ಬಿದಿರಿನ ಕಡ್ಡಿಗಳ ಕಂಬ ಮಾಡಿ, ಅದನ್ನೆಲ್ಲಾ ಒಂದಕ್ಕೊಂದು ಬಿಗಿದು, ಅದರ ಮೇಲೊಂದು ಪ್ಲಾಸ್ಟಿಕ್ ಹೊದಿಕೆ ಹೊದಿಸಿ ಮಾಡಿಕೊಂಡಿದ್ದ ಸಣ್ಣ ಟೆಂಟು. ತಾರಸಿಯ ಮೇಲಿಂದ ಮಾರುಕಟ್ಟೆ ಕಸದ ರಾಶಿಯಾಗಿ ಕಾಣುತ್ತಿತ್ತು. ಅಲೆ ಅಲೆಯಾಗಿ ಬರುವ ಟ್ರಕ್ಕುಗಳು, ಜನಗಳು, ಆಟೋಗಳು, ಹೂವು, ಹಣ್ಣು, ತರಕಾರಿ ಇನ್ನೂ ಏನೇನೊ ಹೊತ್ತು ತರುವಾಗ ಅವುಗಳ ಜೊತೆಗೆ ಮಣ ಕಸವನ್ನು ಹೊತ್ತು ತಂದು ಇಲ್ಲಿಂದ ಹಗುರಾಗಿ ಹೋಗುವಂತೆ ಕಾಣುತ್ತಿತ್ತು. ಈ ಕಸವನ್ನು ಯಾರು ಎಲ್ಲಿಗೆ ಹೊತ್ತು ಹೋಗುತ್ತಾರೆ, ಯಾರು ಸ್ವಚ್ಛ ಮಾಡುತ್ತಾರೆ? ಬಿಬಿಎಂಪಿಯವರು ಕಸ ಹೊತ್ತು ಹೋಗುವಾಗ ಸ್ವಚ್ಛ ಮಾಡುವುದಕ್ಕಿಂತ ಹೆಚ್ಚಾಗಿ ನಾಳಿನ ಕಸದ ಲೋಡಿಗೆ ಸ್ಥಳಾವಕಾಶ ಹೊಂದಿಸುವ ಆತುರದಲ್ಲಿ ಇದ್ದಂತೆ ಕಾಣುತ್ತಿತ್ತು. ಪ್ರತಿ ದಿನ ಹತ್ತು ನಿಮಿಷ ಅಮ್ಮನಿಗೆ ಏನೋ ಒಂದು ನೆಪ ಹೇಳಿ ಇಲ್ಲಿ ಚಂಪಾ, ಬಾಲ ಕೈ ಕೈ ಹಿಡಿದು, ಭುಜಕ್ಕೆ ಭುಜ ತಾಕಿಸಿ ಬೆಚ್ಚಗೆ ಕುಳಿತು, ಟೀ ಮಂಜ ಕೊಡುವ ಸ್ಪೆಷಲ್ ಚಾ ಕುಡಿದು ಭವಿಷ್ಯದ ಯೋಜನೆಗಳನ್ನು ಚರ್ಚಿಸುತ್ತಿದ್ದರು. ಸೀತಾರಾಮರ ವನವಾಸಕ್ಕೆ ಲಕ್ಷ್ಮಣ ಜೊತೆಯಾದಂತೆ ಟೀ ಮಂಜನು ಇವರ ಯೋಜನೆಯಲ್ಲಿ ಸ್ವಯಂಪ್ರೇರಿತನಾಗಿ ಸೇರಿಕೊಂಡಿದ್ದ. ಬಾಲನಿಗೆ ಅಪ್ಪನನ್ನು ಮೀರಿಸುವಂಥ ವ್ಯಾಪಾರ ಸೃಷ್ಟಿಸುವ ಬಯಕೆ. ಚಂಪಾಳಿಗೆ ಓದಿ ಟೀಚರ್ ಆಗುವ ಹಂಬಲ. ಮಂಜನಿಗೆ ಹೊಸ ಅನುಭವದ, ರೋಮಾಂಚನದ ಪುಳಕ.

ಈಗೊಂದು ವರ್ಷದ ಕೆಳಗೆ ಮನೆಯ ಎದುರಿಗೆ ಬೃಹತ್ತಾದ ಮಾಲೊಂದು ಎದ್ದು, ಅದರ ಒಳಗೆ ಹೋಗಿ ಬರುವ ಹುಡುಗಿಯರ ಜೀನ್ಸ್, ಟೀಶರ್ಟ್, ಟಾಪ್ ಕಣ್ಣಿಗೇರಿಸಿದ್ದ ಕೂಲಿಂಗ್,